**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 313/2015**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 14**

**ದಿನಾಂಕಃ** 06.03.2025 **ಸಿಡಬ್ಲ್ಯೂ 11**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದ ಃ**

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಆರೋಪಿ ಭೂಮಿಕಾ ಮೈಕ್ರೋ ಏಜೆನ್ಸಿಯಲ್ಲಿ ನಿರ್ದೇಶಕರಾಗಿದ್ದರು ಎಂಬ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ಇನ್ಸುರೆನ್ಸ ಏಜೆಂಟ್ ಆಗಿದ್ದಕ್ಕೆ ಹಾಗೂ ಕಮೀಷನ್ ಪಡೆಯುವ ಬಗ್ಗೆ ಆರೋಪಿಯೊಂದಿಗೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ. ನಿಪಿ.17 ಮತ್ತು 18 ಎಲ್ ಐ ಸಿ ಇನ್ಸುರೆನ್ಸ ಕಂಪನಿಗೆ ಸಂಬಂದಪಟ್ಟ ದಾಖಲೆಗಳು ಎಂದರೆ ಸರಿ. ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ 4-5 ಜನ ಇದ್ದರು. ನಾನು ಹಣವನ್ನು ಪೂರ್ಣಿಮಾ ಎನ್ನುವವರ ಬಳಿ ಕಟ್ಟುತ್ತಿದ್ದೆನು. ನಾನು ಪಾಲಿಸಿ ಹಣವನ್ನು ಸದರಿ ಕಂಪನಿಗೆ ಹಣ ಸಂದಾಯ ಮಾಡಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿದ್ದೇನೆ. ಸದರಿಯವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. 95,000/- ರೂಗಳನ್ನು ನಾನು ವೈಯಕ್ತಿಕವಾಗಿ ಆರೋಪಿ ಕೈಗೆ ನೀಡಿಲ್ಲ ಎಂದರೆ ಸರಿ. ನಾನು ಚಾಸಾ.6 ರಿಂದ 10 ಮತ್ತು ಚಾಸಾ.12 ರಿಂದ 17 ರವರು ಎಲ್ಲರೂ ಅಂಗನವಾಡಿ ಶಿಕ್ಷಕರಾಗಿದ್ದು ಆಗಾಗ ಸಭೆಗಳಲ್ಲಿ ಬೇಟಿಯಾಗುತ್ತಿದ್ದೆವು ಎಂದರೆ ಸರಿ. ಅದೇ ರೀತಿ ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸರಿ. ನಾನವು ಪೊಲೀಸ್ ಠಾಣೆಗೆ ಮತ್ತು ಶಿವಮೊಗ್ಗ ಕಚೇರಿಗೆ ಎಲ್ಲರೂ ಮಾತನಾಡಿಕೊಂಡು ಹೋಗಿದ್ದೇವೆ ಎಂದರೆ ಸರಿ. ಅದೇ ರೀತಿ ಈ ದಿನ ನ್ಯಾಯಾಲಯಕ್ಕೂ ಸಹ ಒಬ್ಬರಿಗೊಬ್ಬರು ತಿಳಿಸಿ ಬಂದಿದ್ದೇವೆ ಎಂದರೆ ಸರಿ. ನಾನು ಹಣವನ್ನು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ ಪೂರ್ಣಿಮಾ ಎನ್ನುವವರಿಗೆ ಹಣ ಸಂದಾಯ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ಹೇಳಿಲ್ಲ. ನಾನು ಶಿವಮೊಗ್ಗ ಕಚೇರಿಯವರು ಹೇಳಿದ ಮೇರೆಗೆ ನಿಪಿ.19 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರು ಮತ್ತು ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಣ ದುರ್ಬಳಕೆ ಮಾಡದಿದ್ದರೂ ಸಹ ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ.17 ಹಾಗೂ 18 ರಶೀದಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 313/2015**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 13**

**ದಿನಾಂಕಃ 06.03.2025** **ಸಿಡಬ್ಲ್ಯೂ 14**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದ ಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನಿಪಿ.15 ಮತ್ತು 16 ಎಲ್ ಐ ಸಿ ಇನ್ಸುರೆನ್ಸ ಕಂಪನಿಗೆ ಸಂಬಂದಪಟ್ಟ ದಾಖಲೆಗಳು ಎಂದರೆ ಸರಿ. ನಾನು, ಚಾಸಾ.6 ಮತ್ತು 13, 16 ಮತ್ತು 17 ರವರು ಎಲ್ಲರೂ ಅಂಗನವಾಡಿ ಶಿಕ್ಷಕರಾಗಿದ್ದು ಆಗಾಗ ಸಭೆಗಳಲ್ಲಿ ಬೇಟಿಯಾಗುತ್ತಿದ್ದೆವು ಎಂದರೆ ಸರಿ. ನೇತ್ರಾವತಿಯವರು ಏಜೆಂಟರಾಗಿ ನೇಮಕವಾದ ಬಗ್ಗೆ ದಾಖಲಾತಿಗಳನ್ನು ನಾನು ನೋಡಿಲ್ಲ. ಇನ್ಸುರೆನ್ಸ ಏಜೆಂಟ್ ಆಗಿದ್ದಕ್ಕೆ ಹಾಗೂ ಕಮೀಷನ್ ಪಡೆಯುವ ಬಗ್ಗೆ ಆರೋಪಿಯೊಂದಿಗೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ. ನಾನು ಪಾಲಿಸಿ ಹಣವನ್ನು ಸದರಿ ಕಂಪನಿಗೆ ಹಣ ಸಂದಾಯ ಮಾಡಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿಲ್ಲ. ನಿಪಿ.14 ರಲ್ಲಿ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ ಹಣ ಸಂದಾಯ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. 49,150/- ರೂಗಳನ್ನು ನಾನು ಆರೋಪಿಗೆ ವೈಯಕ್ತಿಕವಾಗಿ ನೀಡಿಲ್ಲ ಎಂದರೆ ಸರಿ. ನಾನು ಶಿವಮೊಗ್ಗ ವಿಭಾಗೀಯ ಕಚೆರಿಗೆ 2013 ರ ಮಾರ್ಚ ತಿಂಗಳಲ್ಲಿ ಹೋಗಿದ್ದೆನು. ಸದರಿ ಕಚೇರಿಯವರು ಹೇಳಿದ ಮೇರೆಗೆ ನಿಪಿ.14 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಆರೋಪಿ ಯಾವುದೇ ಹಣ ದುರ್ಬಳಕೆ ಮಾಡದಿದ್ದರೂ ಸಹ ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ.15 ಹಾಗೂ 16 ರಶೀದಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರು ಮತ್ತು ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

ಸಿ.ಸಿ. 313/2015

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 11**

**ದಿನಾಂಕಃ** 06.03.2025 **ಸಿಡಬ್ಲ್ಯೂ** 07

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದ ಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನಿಪಿ.26 ಮತ್ತು 27 ಇನ್ಸುರೆನ್ಸ ಕಂಪನಿಗೆ ಸಂಬಂದಪಟ್ಟ ದಾಖಲೆಗಳು ಎಂದರೆ ಸರಿ. ನಮ್ಮ ಬಿಳಸನೂರು ಗ್ರಾಮದ ಆರೋಗ್ಯ ಕೇಂದ್ರದ ಸೆಕ್ಟರ್ ಸಭೆಗಳ ಬಗ್ಗೆ ನಡವಳಿಯಾಗುತ್ತವೆ ಎಂದರೆ ಸರಿ. ಆರೋಪಿ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ ಮೈಕ್ರೋ ಇನ್ಸುರೆನ್ಸ ಏಜೆಂಟ್ ಆಗಿ ಇದ್ದರು ಎಂಬ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. ಆರೋಪಿ ನಮಗೆ ಶೇಕಡಾ 6 ರಷ್ಟು ಕಮೀಷನ್ ಕೊಡುತ್ತೇವೆ ಎಂದು ಹೇಳಿದ್ದು ಈ ಬಗ್ಗೆ ಯಾವುದೇ ಕರಾರು ಒಪ್ಪಂದ ಮಾಡಿಕೊಂಡಿಲ್ಲ. ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿ ಕಚೇರಿಯಲ್ಲಿ 3 ಜನ ಸಿಬ್ಬಂದಿ ಇದ್ದರು. ಸದರಿ ಕಂಪನಿಗೆ ಹಣ ಸಂದಾಯ ಮಾಡಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿದ್ದೇನೆ. ಸದರಿ ರಶೀದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಆರೋಪಿಗೆ ಯಾವತ್ತಿಗೂ ನೇರವಾಗಿ ಹಣವನ್ನು ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಕಚೇರಿಗೆ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಶಿವಮೊಗ್ಗ ಕಚೇರಿಗೆ ಯಾರು ಯಾರು ಹೋಗಿದ್ದೆವು ನೆನಪಿಲ್ಲ. ಸಾಕ್ಷಿಯು ಸುಮಾರು 10-12 ಜನ ಹೋಗಿದ್ದೆವು ಎಂದು ನುಡಿಯುತ್ತಾರೆ. ಶಿವಮೊಗ್ಗ ಕಚೇರಿಯವರು ಹೇಳಿದ ರೀತಿ ನಿಪಿ.10 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ. ನಿಪಿ.11 ರಲ್ಲಿ ಯಾವುದೇ ಸಂಸ್ಥೆಯ ಸಹಿ ಅಥವಾ ಮೊಹರು ಇಲ್ಲ ಎಂದರೆ ಸರಿ. ನಾನು, ಚಾಸಾ.6 ಮತ್ತು 8 ರಿಂದ 17 ರವರು ಎಲ್ಲರೂ ಅಂಗನವಾಡಿ ಶಿಕ್ಷಕರಾಗಿದ್ದು ಆಗಾಗ ಸಭೆಗಳಲ್ಲಿ ಬೇಟಿಯಾಗುತ್ತಿದ್ದೆವು ಎಂದರೆ ಸರಿ. ನಾವೆಲ್ಲರೂ ಸಹ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ , ಶಿವಮೊಗ್ಗ ಕಚೇರಿ ಮತ್ತು ಠಾಣೆಗೂ ಸಹ ಒಟ್ಟಿಗೆ ಮಾತಾಡಿಕೊಂಡು ಹೋಗಿದ್ದೆವು ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ನಾವು ಒಬ್ಬರಿಗೊಬ್ಬರು ತಿಳಿಸಿ ಬಂದಿರುತ್ತೇವೆ ಎಂದರೆ ಸರಿ. ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ ಆರೋಪಿ, ಚಿದಾನಂದ, ಪೂರ್ಣಿಮಾ ಮತ್ತು ಇನ್ನೊಬ್ಬ ಮಹಿಳೆ ಇರುತ್ತಿದ್ದರು. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿ ಭೂಮಿಕಾ ಮೈಕ್ರೋ ಏಜೆನ್ಸಿಯಲ್ಲಿ ನಿರ್ದೇಶಕರಾಗಿದ್ದರು ಎಂದು ನಿಮ್ಮ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಿಂದ ಠಾಣೆಗೆ ಹೋಗಿ ನಂತರ ಶಿವಮೊಗ್ಗ ಕಚೆರಿಗೆ ಹೋಗಿದ್ದೆನು. ನಾನು ಶಿವಮೊಗ್ಗ ಕಚೆರಿಗೆ ಹೋದ ನಂತರ ಯಾವತ್ತಿಗೂ ಠಾಣೆಗೆ ಹೋಗಿಲ್ಲ. ಆರೋಪಿ ಯಾವುದೇ ಹಣ ದುರ್ಬಳಕೆ ಮಾಡದಿದ್ದರೂ ಸಹ ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ.26 ಹಾಗೂ 27 ರಶೀದಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರು ಮತ್ತು ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿ.ಸಿ. 313/2015

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 10**
**ದಿನಾಂಕಃ 06.03.2025** **ಸಿಡಬ್ಲ್ಯೂ 13**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದ ಃ**

ನಾನು ಎಂ ಎ ಪದವೀಧರೆ. ನನಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನಾನು ಈ ಮೊದಲು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆನು. ಈಗ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಪಿ.24 ಮತ್ತು 25 ಇನ್ಸುರೆನ್ಸ ಕಂಪನಿಗೆ ಸಂಬಂದಪಟ್ಟ ದಾಖಲೆಗಳು ಎಂದರೆ ಸರಿ. ನಿಪಿ.24 ರಶೀದಿಗಳಲ್ಲಿ ಆರೋಪಿಯ ಸಹಿ ಇಲ್ಲ. ಅದೇ ರೀತಿ ಸದರಿ ದಾಖಲೆಗಳು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ ಸಂಬಂದಿಸಿದವು ಎಂದು ಸಹ ನಮೂದು ಇಲ್ಲ ಎಂದರೆ ಸರಿ. ಆರೋಪಿ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ ಮೈಕ್ರೋ ಇನ್ಸುರೆನ್ಸ ಏಜೆಂಟ್ ಆಗಿ ಇದ್ದರು ಎಂಬ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ ಹಣ ಸಂದಾಯ ಮಾಡಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ.24 ಮತ್ತು 25 ನ್ನು ತೋರಿಸಲಾಗಿ ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರ ಅಂದರೆ 42,500/- ರೂಗಳನ್ನು ಆರೋಪಿಯ ಕಚೇರಿಯಲ್ಲಿ ತುಂಬಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿದ್ದೇನೆ. ಸದರಿ ರಶೀದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಶಿವಮೊಗ್ಗ ಕಚೇರಿಗೆ ಬೇಟಿ ನೀಡಿದ ದಿನಾಂಕ ನನಗೆ ನೆನಪಿಲ್ಲ. ದಿನಾಂಕ, ತಿಂಗಳು ನನಗೆ ನೆನಪಿಲ್ಲ. ನಾನು ಆರೋಪಿಯ ವಿರುದ್ಧ ಶಿವಮೊಗ್ಗ ಕಚೇರಿಯವರು ಹೇಳಿದ ಮೇರೆಗೆ ನಿಪಿ.9 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ. ಶಿವಮೊಗ್ಗ ಕಚೇರಿಯವರು ನಾನು ನೀಡಿದ ದೂರಿನನ್ವಯ ಆರೋಪಿಯ ವಿರುದ್ಧ ಯಾವ ಕ್ರಮ ಕೈಗೊಂಡಿದೆ ಎಂದು ನಾನು ತಿಳಿದುಕೊಂಡಿಲ್ಲ. ನಿಸಿ.3 ರಲ್ಲಿ ಯಾವುದೇ ಸಂಸ್ಥೆಯ ಸಹಿ ಅಥವಾ ಮೊಹರು ಇಲ್ಲ ಎಂದರೆ ಸರಿ. ಆರೋಪಿಯನ್ನು ನಾನು ಮೊದಲ ಬಾರಿಗೆ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಚೇರಿಯಲ್ಲಿ ನೋಡಿದ್ದೇನೆ. ನಾನು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ ಏಜೆಂಟ್ ಆಗಿ ನೇಮಕವಾದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ನಾನು ಮಾಡಿಸಿರುವ ಪಾಲಿಸಿಗಳಲ್ಲಿ 4 ಪಾಲಿಸಿಗಳು ಧಾರವಾಡ ವಿಭಾಗೀಯ ಕಚೇರಿಗೆ ಸಂಬಂದಿಸಿದ ಪಾಲಿಸಿಗಳು ಎಂದರೆ ಸರಿ. ನಾನು ಧಾರವಾಡ ವಿಭಾಗೀಯ ಕಚೇರಿಗೆ ದೂರನ್ನು ನೀಡಿಲ್ಲ. ಆರೋಪಿ ಯಾವುದೇ ಹಣ ದುರ್ಬಳಕೆ ಮಾಡದಿದ್ದರೂ ಸಹ ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ ಕಟ್ಟಿದ ಹಣವನ್ನು ಎಲ್ ಐ ಸಿ ಕಚೇರಿಗೆ ಕಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಭೂಮಿಕಾ ಮೈಕ್ರೋ ಇನ್ಸುರೆನ್ಸಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.26 ರಶೀದಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾನು ಶಿವಮೊಗ್ಗ ಕಚೇರಿಗೆ ಹೋದಾಗ ಸುಮಾರು 15–20 ಜನ ಇದ್ದೆವು. ನಾನು ಸದರಿ ಕಚೇರಿಗೆ ನನ್ನ ಚಿಕ್ಕಮ್ಮನೊಂದಿಗೆ ಹೋಗಿದ್ದೆನು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಗೆ ಇನ್ನೊಂದು ಬಾರಿ ಕೇಳಲಾಗಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸ ಠಾಣೆಗೆ ಯಾವ ದಿನಾಂಕದಂದು ಹೋಗಿದ್ದೆನು ಎಂದು ನನಗೆ ನೆನಪಿಲ್ಲ. ಸಾಕ್ಷಿಯು 2013 ರಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರು ಮತ್ತು ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿ.ಸಿ. 313/2015

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ.09**

**ದಿನಾಂಕಃ 06.03.2025**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದ ಃ**

ನಾನು ಬಿ ಎ ಪದವೀಧರೆ. ನನಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನಾನು ಅಂಗನವಾಡಿ ಶಿಕ್ಷಕಿಯಾಗಿ ನಮ್ಮ ಅಂಗನವಾಡಿಯಲ್ಲಿ ಬರುವ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕು ಎಂದು ಮಾಹಿತಿ ಇದೆ ಎಂದರೆ ಸರಿ. ನಾನು ಪಾಲಿಸಿಯನ್ನು ಎಲ್ ಐ ಸಿ ಕಚೇರಿಯಲ್ಲಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಮೇಲಿರುವ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಚೇರಿಯಲ್ಲಿ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಚೇರಿಯವರು ನನಗೆ ಪಾಲಿಸಿ ಬಾಂಡ್ ಗಳನ್ನು ನೀಡಿದ್ದರು. ಸದರಿ ಬಾಂಡ್ ಗಳನ್ನು ನಾನು ಪೊಲೀಸರಿಗೆ ನೀಡಿಲ್ಲ. ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಚೇರಿಯವರು ನೀಡಿದ ಬಾಂಡ್ ಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸಾಕ್ಷಿಯು ನಿಪಿ.31 ನ್ನು ಗುರುತಿಸಿ ಸದರಿ ಬಾಂಡ್ ಗಳನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಬಾಂಡ್ ಗಳ ಮೇಲೆ ಭೂಮಿಕಾ ಮೈಕ್ರೋ ಇನ್ಸುರೆನ್ಸ ರವರು ನೀಡಿದ ಬಾಂಡ್ ಗಳು ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ.30 ರಲ್ಲಿರುವ ಎಲ್ಲಾ ಪಾಲಿಸಿ ಬಾಂಡ್ ಮತ್ತು ರಶೀದಿ ಪುಸ್ತಕಗಳು ಎಲ್ ಐ ಸಿ ಗೆ ಸಂಬಂಧಿಸಿದ ಬಾಂಡ್ ಗಳು ಎಂದರೆ ಸರಿ. ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಗೆ ಸಂಬಂಧಿಸಿದವು ಅಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಂದು ಸಂಸ್ಥೆಯಲ್ಲಿ ಹಣ ಸಂದಾಯ ಮಾಡಿದ ರಶೀದಿ ಪಡೆಯಬೇಕು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರ ಅಂದರೆ 31,500/- ರೂಗಳನ್ನು ಆರೋಪಿಯ ಕಚೇರಿಯಲ್ಲಿ ತುಂಬಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿದ್ದೇನೆ. ಸದರಿ ರಶೀದಿಗಳು ಗಣಕೀಕೃತ ರಶೀದಿಗಳಾಗಿದ್ದು ಅವುಗಳನ್ನು ಆರೋಪಿ ಸಹಿ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ರಶೀದಿಗಳನ್ನು ಪೊಲೀಸರಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸಾಕ್ಷಿಗೆ ನಿಪಿ.30 ನ್ನು ತೋರಿಸಲಾಗಿ ಅದರಲ್ಲಿ ಅಂತಹ ರಶೀದಿಗಳು ಇಲ್ಲ ಎಂದು ನುಡಿಯುತ್ತಾರೆ.

ನಾನು ಆರೋಪಿಯನ್ನು ಮೊದಲ ಬಾರಿಗೆ ಸುಮಾರು 12 ವರ್ಷಗಳಿಂದ ನೋಡಿದ್ದೇನೆ. ಆರೋಪಿಯೊಂದಿಗೆ ಇನ್ನೊಬ್ಬರು ಚಿದಾನಂದ ಎನ್ನುವವರು ಸಹ ಇದ್ದರು. ಸದರಿಯವರ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಯನ್ನು ನನಗೆ ಯಾರೂ ಪರಿಚಯ ಮಾಡಿಕೊಟ್ಟಿಲ್ಲ ಸಾಕ್ಷಿಯು ಮುಂದುವರೆದು ಅವರೇ ನಮ್ಮ ಸಂಘದ ಸಭೆಗೆ ಬರುತ್ತಿದ್ದರು. ನಮ್ಮ ಸಂಘದ ಸಭೆಗಳಲ್ಲಿ ಸಭೆಯಲ್ಲಿ ಆದ ವಹಿವಾಟುಗಳನ್ನು ನಡುವಳಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಆರೋಪಿ ಸಂಘಕ್ಕೆ ಬಂದ ವಿಚಾರವನ್ನು ನಡುವಳಿಯಲ್ಲಿ ನಮೂದಿಸಿಲ್ಲ. ಆರೋಪಿ ಭಾನುವಳ್ಳಿಯಲ್ಲಿ ನಡೆಯುವ ನಮ್ಮ ಮಾಸಿಕ ಸಭೆಗೆ ಬರುತ್ತಿದ್ದರು. ಸದರಿ ಸಭೆಯ ಠರಾವನ್ನು ನಮ್ಮ ಮೇಲ್ವಿಚಾರಕರು ಮಾಡುತ್ತಾರೆ. ಸದರಿ ಠರಾವನ್ನು ಪೊಲೀಸರು ಪಡೆದ ಬಗ್ಗೆ

ನನಗೆ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿ ವಿರುದ್ಧ ದೂರು ನೀಡಿದ ಬಗ್ಗೆ ನನಗೆ ಪೊಲೀಸರೇ ಮಾಹಿತಿಯನ್ನು ನೀಡಿರುತ್ತಾರೆ. ಹೇಳಿಕೆಯನ್ನು ನೀಡಲು ಪೊಲೀಸರೇ ನನ್ನನ್ನು ಕರೆಸಿಕೊಂಡಿಲ್ಲ ನಾವು ಆರೋಪಿಯ ಇನ್ಸುರೆನ್ಸ ಕಚೇರಿಗೆ ಹೋದಾಗ ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಸಂದರ್ಭದಲ್ಲಿ ನನ್ನೊಂದಿಗೆ ಇನ್ನು 4 ಜನ ಇದ್ದರು. ಸದರಿಯವರು ಎಂದರೆ ರಾಧಾ ಡಿ, ಡಿಜಿ ಸುನಿತಾ ಮತ್ತು ಜಯಮ್ಮ. ನಮಗಿಂತಲೂ ಸುಮಾರು ಜನ ಕಚೇರಿಗೆ ಬಂದು ಹೋಗಿದ್ದರು. ನಾವು ಕಚೇರಿಗೆ ನಮ್ಮ ಕಮಿಷನ್ ಹಣ ಪಡೆಯಲು ಮತ್ತು ಬಾಂಡ್ ಹಣವನ್ನು ಕಟ್ಟಲು ಹೋಗಿದ್ದೆವು. ಸದರಿ ಕಚೇರಿಯಲ್ಲಿ 4 ಜನ ಸಿಬ್ಬಂದಿ ಇದ್ದರು. ಹಣ ಸಂದಾಯ ಮಾಡಿಸಿಕೊಳ್ಳಲು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಸದರಿಯವರ ಹೆಸರು ಗೊತ್ತಿಲ್ಲ. ಪ್ರತಿಬಾರಿ ಹಣ ಸಂದಾಯ ಮಾಡಿದಾಗ ನಾವು ರಶೀದಿಯನ್ನು ಪಡೆದುಕೊಂಡು ಹೋಗುತ್ತೇವೆ ಎಂದರೆ ಸರಿ. ಸದರಿ ರಶೀದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ನಾವು ಕಚೇರಿಗೆ ಆರೋಪಿಯ ವಿರುದ್ಧ ದೂರು ನೀಡಿದ ದಿನವೇ ಹೋಗಿದ್ದೆವು. ಅದೇ ದಿನ ಪೊಲೀಸರು ನಮ್ಮ ಹೇಳಿಕೆ ಪಡೆದಿರುತ್ತಾರೆ. ಪೊಲೀಸರು ಸದರಿ ದಿನ ಕಚೇರಿಗೆ ಬರುವ ಪೂರ್ವದಲ್ಲಿ ನಾನು ಮತ್ತು ನನ್ನ ಜೊತೆ ಇದ್ದ ಇತರೆ 4 ಜನ ಯಾವುದೇ ದೂರು ನೀಡಲು ಪ್ರಯತ್ನ ಪಟ್ಟಿಲ್ಲ. ನಾನು ಕಚೇರಿಗೆ ಹೋಗುವ ಪೂರ್ವದಲ್ಲಿ ಹಣ ದುರುಪಯೋಗವಾದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ನನ್ನೊಂದಿಗೆ ಇದ್ದ ಇತರೆ 4 ಜನಕ್ಕೂ ಸಹ ಮಾಹಿತಿ ಇರಲಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಚೇರಿಯನ್ನು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಪಕ್ಕದಲ್ಲಿ ಹಾಕಿದ್ದು ಎಂದು ನಮೂದು ಇದೆ ಎಂದರೆ ಸರಿ. ಈ ರೀತಿ ನಾನು ಪೊಲೀಸರಿಗೆ ಹೇಳಿಲ್ಲ. ಸದರಿ ಭಾಗವನ್ನು ನಿಡಿ. 5 ಎಂದು ಗುರುತಿಸಲಾಯಿತು. ಭೂಮಿಕಾ ಮೈಕ್ರೋ ಏಜೆನ್ಸಿಯವರು ಹಣ ಸಂದಾಯ ಮಾಡಿದ ಬಗ್ಗೆ ಪಡೆದ ರಶೀದಿಗಳಂತೆ ಹಣ ಸಂದಾಯವಾದ ಬಗ್ಗೆ ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಪಾಸ ಬುಕ್ ನಲ್ಲಿ ನಮೂದು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.30 ರಲ್ಲಿ ಹಾಜರುಪಡಿಸಿದ ರಶೀದಿ ಪುಸ್ತಕಗಳಲ್ಲಿ ಆರೋಪಿ ಸಹಿ ಎಲ್ಲಿಯೂ ಇಲ್ಲ ಎಂದರೆ ಸರಿ. ಸದರಿ ರಶೀದಿ ಪುಸ್ತಕವು ನಾವು ಯಾರಿಗೆ ಹಣ ಸಂದಾಯ ಮಾಡಿರುತ್ತೇವೆ ಅವರು ಸಹಿ ಮಾಡಿದ ನೀಡಿದ ದಾಖಲೆಗಳು ಎಂದರೆ ಸರಿ. ಈ ರೀತಿ ನಾವು ಹಣವನ್ನು ಕಚೇರಿಯಲ್ಲಿರುವ ಇಬ್ಬರು ಹೆಣ್ಣುಮಕ್ಕಳು ಕೈಯಲ್ಲಿ ನೀಡಿದ್ದೇವೆ ಎಂದು ಪೊಲೀಸರಿಗೆ ಹೇಳಿಲ್ಲ. ಸಾಮಾನ್ಯವಾಗಿ ಈ ರೀತಿ ಪಡೆದ ಹಣವನ್ನು ಸದರಿ ಹೆಣ್ಣು ಮಕ್ಕಳು ತಾವೇ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ ಎಂದರೆ ಗೊತ್ತಿಲ್ಲ. ನಾವು ಪಾಲಿಸಿ ಹಣವನ್ನು ಆರೋಪಿಗೆ ನೀಡಿದ್ದೆವು ಆರೋಪಿ ಹಣವನ್ನು ಕಂಪನಿಗೆ ಕಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿಯ ಕೈಯಲ್ಲಿ ಯಾವತ್ತಿಗೂ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಮೊದಲ ಬಾರಿಗೆ ಹಣವನ್ನು ನಾನು ಆರೋಪಿ ಕೈಯಲ್ಲಿ ನೀಡಿದ್ದೇನೆ. ನಂತರದಲ್ಲಿ ಕಚೇರಿಗೆ ಕಟ್ಟುತ್ತಿದ್ದೆನು. ತದನಂತರದಲ್ಲಿ ಶಿವಮೊಗ್ಗ ಕಚೇರಿಗೆ ಹೋದಾಗ ನನಗೆ ಆರೋಪಿ ಹಣ ದುರ್ಬಳಕೆ ಮಾಡಿದ ವಿಚಾರ ತಿಳಿದಿರುತ್ತದೆ. ನಾನು ಭೂಮಿಕಾ ಮೈಕ್ರೋ ಏಜೆನ್ಸಿ ಕಚೇರಿಗೆ ಹೋಗಿ ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ 1 – 1 ½ ತಿಂಗಳ ತರುವಾಯ ಶಿವಮೊಗ್ಗ ಕಚೇರಿಗೆ ಹೋಗಿದ್ದೆನು. ಶಿವಮೊಗ್ಗ ಕಚೇರಿಗೆ ಸುಮಾರು 25–30 ಜನ ಹೋಗಿದ್ದೆವು. ನನ್ನೊಂದಿಗೆ 4 ಜನ ಬಂದಿದ್ದರು. ಅವರೊಂದಿಗೆ ಖತಮುನ್ನಿಸಾ ಮತ್ತು ಇನ್ನಿಬ್ಬರು ಬಂದಿದ್ದರು. ಸದರಿ ಕಚೇರಿಯವರು ಹೇಳಿದ ಪ್ರಕಾರ ನಾನು ದೂರು ಕೊಟ್ಟಿರುತ್ತೇನೆ

ಎಂದರೆ ಸರಿ. ಸದರಿ ಕಚೇರಿಯವರು ಆರೋಪಿಯ ವಿರುದ್ಧ ಏನು ಕ್ರಮ ತೆಗೆದುಕೊಂಡರು ಎಂದು ನಾನು ವಿಚಾರಣೆ ಮಾಡಿಲ್ಲ. ಆರೋಪಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಶಿವಮೊಗ್ಗ ಕಚೇರಿಯವರು ಹೇಳಿದ ಮೇರೆಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಪೊಲೀಸರು ತನಿಖೆ ಮಾಡಿದ ಸಂದರ್ಭದಲ್ಲಿ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮಾಹಿತಿ ತಿಳಿದು ನಾನೂ ಸಹ ದೂರು ನೀಡಿರುತ್ತೇನೆ. ನಿಪಿ.2 ರಲ್ಲಿ ಅದನ್ನು ಪಡೆದವರ ಸಹಿ ಮತ್ತು ಮೊಹರು ಇಲ್ಲ ಎಂದರೆ ಸರಿ. ನಾನು ಆರೋಪಿಯ ವಿರುದ್ಧ ಯಾವುದೇ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ಪಾಲಿಸಿದಾರರು ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು ಆರೋಪಿಗೆ ಹಣ ನೀಡದಿದ್ದರೂ ಸಹ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ನಾವು ಹಣ ಸಂದಾಯ  ಭೂಮಿಕಾ ಮೈಕ್ರೋ ಏಜೆನ್ಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಭೂಮಿಕಾ ಮೈಕ್ರೋ ಏಜೆನ್ಸಿಯಲ್ಲಿ ಆರೋಪಿಗೆ ಯಾವುದೇ ಹಣಕಾಸಿನ ಜವಾಬ್ದಾರಿ ಇರಲಿಲ್ಲ ಎಂದರೆ ಸರಿಯಲ್ಲ.  ನಾನು ಪೊಲೀಸರ ಮಾತು ಕೇಳಿಕೊಂಡು ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ  ಎಂದರೆ ಸರಿಯಲ್ಲ. ನನ್ನನ್ನು ಭೂಮಿಕಾ ಮೈಕ್ರೋ ಏಜೆನ್ಸಿ ಕಂಪನಿಯವರು ಏಜೆಂಟ್ ಆಗಿ ನೇಮಕ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಪಿ.30 ರಲ್ಲಿ ನಾನು ಹಣವನ್ನು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಚೇರಿಗೆ ಕಟ್ಟಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾವು ಕಟ್ಟಿದ ಹಣವನ್ನು ಭೂಮಿಕಾ ಮೈಕ್ರೋ ಇನ್ಸುರೆನ್ಸ ಸಂಸ್ಥೆಯವರು ಎಲ್ ಐ ಸಿ ಕಚೇರಿಗೆ ಕಟ್ಟಿರುತ್ತಾರೆ. ಈ ಬಗ್ಗೆ ರಶೀದಿಯನ್ನು ಸಹ ನಮಗೆ ನೀಡಿದ್ದಾರೆ ಎಂದರೆ ಸರಿ. ಆದರೆ ನಿಪಿ.30 ರಂತೆ ಕಟ್ಟದೇ ಇರುವ ಹಣವನ್ನು ಕಟ್ಟಿದ್ದೇನೆ ಎಂದು ಶಿವಮೊಗ್ಗ ಕಚೇರಿಯವರ ಮಾತು ಕೇಳಿಕೊಂಡು  ಹಣವನ್ನು ಸಂದಾಯ ಮಾಡಿರುವ ಹಣವನ್ನು ಕಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.30 ಕ್ಕೂ ಮತ್ತು ಭೂಮಿಕಾ ಮೈಕ್ರೋ ಏಜೆನ್ಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.